# ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ನಿಯಮಿತ

ಕೇಂದ್ರ ಕಛೇರಿ : ಮಡಿಕೇರಿ

(ಸ್ಥಾಪನೆ : 1921)

ವೆಬ್‌ಸೈಟ್ : www.kodagudccbank.com ಇ-ಮೇಲ್ :: kdccbank@yahoo.co.in ತಂತಿ : ಕೊಡಗು ಬ್ಯಾಂಕ್

ದೂರವಾಣಿ { ಅಧ್ಯಕ್ಷರು : 228372
ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಕ) : 228744

ಮಡಿಕೇರಿ – 571 201
ಕೊಡಗು

THE KODAGU DIST. CO-OPERATIVE CENTRAL BANK, MADIKERI

ಸಂ./ಸಿಬ್ಬಂದಿ/ನೇಮಕಾತಿ/838 2019–2020 ದಿನಾಂಕ : 04.07.2020

ವಿಷಯ: ಬ್ಯಾಂಕಿನ ನೇಮಕಾತಿ ಪ್ರಕ್ರಿಯೆಯ ಪ್ರಗತಿ ಮತ್ತು ಬ್ಯಾಂಕಿನ ವಾಹನ ಚಾಲಕ ಮತ್ತು ಅಟೆಂಡರ್ ಹುದ್ದೆಯ ಆಯ್ಕೆ ಪ್ರಕ್ರಿಯೆಯ ತಿದ್ದುಪಡಿಯನ್ನು ಬ್ಯಾಂಕಿನ ವೆಬ್ ಸೈಟಿನಲ್ಲಿ ಪ್ರಕಟಿಸುವ ಕುರಿತು–

1) ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 12.02.2020ರಂದು ನೀಡಿದ ನೇಮಕಾತಿ ಅಧಿಸೂಚನೆಯ ವಾಹನ ಚಾಲಕ ಮತ್ತು ಅಟೆಂಡರ್ ಹುದ್ದೆಗೆ ಅರ್ಹತಾ ಪರೀಕ್ಷೆ(ಎಸ್.ಎಸ್.ಎಲ್.ಸಿ)ಯಲ್ಲಿ ಪಡೆಯಲಾದ ಅಂಕ ಪರಿಗಣಿಸಿ, ಪಡೆಯಲಾದ ಅಂಕಗಳ ಶೇಕಡಾವಾರು ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು ಅರ್ಹತಾ ಪರೀಕ್ಷೆ(ಎಸ್.ಎಸ್.ಎಲ್.ಸಿ)ಯಲ್ಲಿ ಪಡೆದ ಅಂಕಗಳನ್ನು ಶೇ.85ಕ್ಕೆ ಪರಿವರ್ತಿಸಿ ಸಂದರ್ಶನದ ಶೇ15ನ್ನು ಒಟ್ಟು ಸೇರಿಸಿ ಆಯ್ಕೆ ಮಾಡಲಾಗುವುದು, ಮುಂದುವರೆದು ವಾಹನ ಚಾಲಕ ಮತ್ತು ಅಟೆಂಡರ್ ಹುದ್ದೆಯ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಕನ್ನಡ ಓದು ಮತ್ತು ಬರಹದ ಜ್ಞಾನ ತಿಳಿದುಕೊಳ್ಳಲು ಬ್ಯಾಂಕಿನಿಂದ ಕನ್ನಡ ಭಾಷೆಯ 50 ಅಂಕಗಳು ಮತ್ತು ಸಾಮಾನ್ಯ ಜ್ಞಾನದ 50 ಅಂಕಗಳು ಒಟ್ಟು 100 ಅಂಕಗಳ ಲಿಖಿತ ಪರೀಕ್ಷೆ ನಡೆಸಲಾಗುವುದು ಎಂದು ಅಧಿ ಸೂಚನೆ ಹೊರಡಿಸಲಾಗಿದೆ. ಆದರೆ ದಿನಾಂಕ 19.06.2020ರಂದು ನಡೆದ ನೇಮಕಾತಿ ಸಮಿತಿ ಸಭೆಯಲ್ಲಿ ವಾಹನ ಚಾಲಕರು ಮತ್ತು ಅಟೆಂಡರ್ ಹುದ್ದೆಗಳ ಆಯ್ಕೆ ವಿಧಾನದ ಬಗ್ಗೆ ಚರ್ಚಿಸಲಾಗಿ ವಾಹನ ಚಾಲಕರು ಮತ್ತು ಅಟೆಂಡರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ.ಪರೀಕ್ಷೆ ಪಾಸಾಗಿರಬೇಕು ಮತ್ತು ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಸಿಸಿರುವುದು ಕಡ್ಡಾಯವಾಗಿರುವುದರಿಂದ ಕನ್ನಡ ಓದು ಮತ್ತು ಬರಹದ ಜ್ಞಾನ ತಿಳಿದುಕೊಳ್ಳಲು ಪುನಃ ಪರೀಕ್ಷೆ ನಡೆಸುವುದು ನಿಯಮದ ಉಲ್ಲಂಘನೆಯಾಗುವುದೆಂದು ಚರ್ಚಿಸಲಾಗಿರುತ್ತದೆ.ಅದರಂತೆ **"ವಾಹನ ಚಾಲಕರು ಮತ್ತು ಅಟೆಂಡರು ಹುದ್ದೆಗಳಿಗೆ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಕನ್ನಡ ಭಾಷೆಯ ಓದು ಬರಹ ಮತ್ತು ಸಾಮಾನ್ಯ ಜ್ಞಾನವನ್ನು ತಿಳಿದುಕೊಳ್ಳಲು ಬ್ಯಾಂಕಿನಿಂದ ಕನ್ನಡ ಭಾಷೆಯ 50 ಅಂಕ ಮತ್ತು ಸಾಮಾನ್ಯ ಜ್ಞಾನದ 50 ಅಂಕಗಳು ಒಟ್ಟು 100 ಅಂಕಗಳ ಲಿಖಿತ ಪರೀಕ್ಷೆ ನಡೆಸುವ"** ಅಧಿಸೂಚನೆಯಲ್ಲಿನ ಅಂಶಗಳನ್ನು ಕೈ ಬಿಡಲು ನೇಮಕಾತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

**2) ಬ್ಯಾಂಕಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸ್ವೀಕೃತ ಅರ್ಜಿಗಳ ಪರಿಶೀಲನೆಯಾಗಿರುತ್ತದೆ, ಆದರೆ ಲಿಖಿತ ಪರೀಕ್ಷೆ ನಡೆಸುವ ಸಂಬಂಧ ಕೋವಿಡ್–19ರ ನಿರ್ಬಂಧಗಳ ಹಿನ್ನೆಲೆಯಲ್ಲಿ ಲಿಖಿತ ಪರೀಕ್ಷೆಯ ದಿನಾಂಕವನ್ನು ನಿಗದಿಪಡಿಸಲು ಜಿಲ್ಲಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆಯಬೇಕಾಗಿದ್ದು ಲಿಖಿತ ಪರೀಕ್ಷೆ ದಿನಾಂಕ ನಿಗದಿಪಡಿಸಿದ ತಕ್ಷಣ ಅಭ್ಯರ್ಥಿಗಳಿಗೆ ನೋಂದಾಯಿತ ಅಂಚೆ ಮೂಲಕ ಪ್ರವೇಶ ಪತ್ರವನ್ನು ಕಳುಹಿಸಿಕೊಡಲಾಗುವುದು ಹಾಗೂ ಬ್ಯಾಂಕಿನ ವೆಬ್ ಸೈಟಿನಲ್ಲಿ ಪ್ರಕಟಿಸಲಾಗುವುದು.**

ಮುಖ್ಯಕಾರ್ಯನಿರ್ವಾಹಣಾಧಿಕಾರಿ(ಪ್ರ)